

ಡಾ.ವಿನೋದ ಛೆಬ್ಬಿ

ಸಂಗಾತಿಯ ಆತಂಕಕ್ಕೆ ತನ್ನ ಆತಂಕವನ್ನೂ ಮೇಳೈಸಿದರೆ ಹೇಗಿರುತ್ತದೆ?

# 34: ಆತಂಕಭಾವದ ದಂಪತಿ

ಸುಮಾ ಹಾಗೂ ಸುಮೇಶ (ಹೆಸರುಗಳು ಕಾಲ್ಪನಿಕ) ಅವರನ್ನು ಮಹಿಳಾ ವೈದ್ಯರೊಬ್ಬರು ನನ್ನ ಹತ್ತಿರ ಕಳಿಸಿದ್ದಾರೆ. ಮದುವೆಯಾಗಿ ಐದು ವರ್ಷಗಳಾಗಿವೆ. ಸಮಸ್ಯೆ ಏನೆಂದರೆ ಇವರಿಗೆ ಮಕ್ಕಳಾಗಿಲ್ಲ. ಯಾಕೆಂದರೆ ಇವರ ನಡುವೆ ಮೊದಲ ಸಂಭೋಗವೇ ಆಗಿಲ್ಲ. ಯಾಕೆ ಆಗಿಲ್ಲವೆಂದರೆ ಸಂಭೋಗದ ಪ್ರಾಥಮಿಕ ಜ್ಞಾನ ಇಬ್ಬರಿಗೂ ತಿಳಿದಿಲ್ಲ. ಯಾಕೆ ತಿಳಿದಿಲ್ಲ ಎಂದರೆ ಸಂಭೋಗದ ಬಗೆಗೆ ತಿಳಿದುಕೊಳ್ಳುವುದರ ಬಗೆಗೇ ಆತಂಕ ಇದೆ. ಏನೇನೂ ವಿಚಿತ್ರವಲ್ಲದ ಇವರ ನಂಟಿನ ಬಗೆಗೆ ಹೆಚ್ಚು ತಿಳಿಯೋಣ.

ಸುಮಾ–ಸುಮೇಶ ಇವರದು ಹಿರಿಯರು ವ್ಯವಸ್ಥೆಗೊಳಿಸಿದ ವಿವಾಹ. ಇಬ್ಬರ ಅಪ್ಪಂದಿರು ಒಂದೇ ಸರಕಾರಿ ಆಫೀಸಿನಲ್ಲಿದ್ದು ಸ್ನೇಹಿತರಾಗಿದ್ದರು. ಸುಮಾಳ ಅಪ್ಪನ ಸ್ವಭಾವ ಇಲಿ ಹೋಯಿತೆಂದರೆ ಹುಲಿ ಹೋಯಿತು ಎನ್ನುವಂತೆ ಇದ್ದರೆ, ಸುಮೇಶನ ಅಪ್ಪನ ಸ್ವಭಾವ ಕಡ್ಡಿಯನ್ನು ಗುಡ್ಡ ಮಾಡಿ ನೋಡದ ಹೊರತೂ ಸಮಾಧಾನ ಇಲ್ಲವೆಂತಿತ್ತು. ಇಬ್ಬರದೂ ಧೋರಣೆಯ ಸ್ವಭಾವ ವಿನಾ ಯಾರನ್ನೂ ಮೆಚ್ಚುವವರಲ್ಲ. ಈ ಮದುವೆ ನಡೆದಿದ್ದೂ ಸ್ವಲ್ಪ ಒತ್ತಾಯದಿಂದಲೇ ಎನ್ನಬಹುದು. ಹೇಗೆ? ಇಪ್ಪತ್ತೈದು ದಾಟಿದ ಹೆಣ್ಣುಗಳಿಗೆ ಅವರ ಜಾತಿಯಲ್ಲಿ ಗಂಡು ಸಿಗುವುದಿಲ್ಲ ಎಂಬ ನಂಬಿಕೆ ಇತ್ತು. ಇನ್ನು ಸುಮೇಶ? ಅವನು ವಿಶೇಷ ಓದಿಲ್ಲ ಆದರೂ ಸರಕಾರೀ ಕೆಲಸದಲ್ಲಿ ಇರುವುದೇ ಒಂದು ಅರ್ಹತೆಯಾಯಿತು. ಮದುವೆಯನ್ನು ಸರಕಾರಿ ಸಂಸ್ಥೆಯ ಛತ್ರದಲ್ಲಿ ಮಾಡಲು ಹೋಗಿ, ತಾರೀಖಿನಲ್ಲಿ ಗೊಂದಲ ಉಂಟಾಗಿ ದೊರಕದೆ, ಇನ್ನೊಂದು ಛತ್ರಕ್ಕೆ ಬದಲಾಯಿಸಿ, ಅದು ಮಳೆನೀರಿನಲ್ಲಿ ಮುಳುಗಿದ್ದರಿಂದ ಪುನಃ ಹೇಗೋ ಸರಕಾರಿ ಛತ್ರದಲ್ಲೇ ಮದುವೆ ನೆರವೇರಿತು. ಅದಾದ ಮೇಲೆ ಮಧುಚಂದ್ರಕ್ಕೆ ಹೋಗಲಾಗಲಿಲ್ಲ. ಯಾಕೆ? ಯಾರೂ ಅದರ ಬಗೆಗೆ ಯೋಚಿಸಿರಲಿಲ್ಲವಂತೆ.

ಸುಮೇಶನದು ಆತಂಕದ ಸ್ವಭಾವ. ಎಲ್ಲವನ್ನೂ ಆತುರದಿಂದ ಮುಂಚೆಯೇ ಮುಗಿಸುತ್ತಾನೆ. ಯಾಕೆ? ಅಕಸ್ಮಾತ್ ಕೈತಪ್ಪಿದರೆ? ಹಾಗಾಗಿ ಕಾರ್ಯದ ಉತ್ಕೃಷ್ಟತೆ ಮೊಟಕಾದರೂ ಸರಿ, ಬೇಗ ಮುಗಿಸುವುದೇ ಅವನ ಮಂತ್ರ. ಊಟ ಹತ್ತೇ ನಿಮಿಷಗಳಲ್ಲಿ ಮಾಡಿ ಮುಗಿಸುತ್ತಾನೆ. ರಜಾದಿನಗಳಲ್ಲಿ? ಆಗಲೂ ಅಷ್ಟೆ. ಯಾಕೆ? ತಾನಿನ್ನೂ ತಿನ್ನುತ್ತಿದ್ದರೆ ಇತರರು ತನ್ನನ್ನು ಗಮನಿಸುತ್ತಾರೆ ಎಂದುಕೊಳ್ಳುತ್ತಾನೆ. ತನಗೆ ಆರಾಮವಾಗಿ ತಿನ್ನುವ ಯೋಗ್ಯತೆ ಇಲ್ಲ ಎಂದುಕೊಳ್ಳುತ್ತಾರೆ ಎಂದು ನಂಬುತ್ತಾನೆ. ಇನ್ನು, ಪ್ರಯಾಣಕ್ಕೆ ಬಂದರೆ ಮುಗಿಯಿತು, ಎರಡು ಗಂಟೆ ಮುಂಚೆಯೇ ನಿಲ್ದಾಣದಲ್ಲಿ ಧ್ವಜ ಊರುತ್ತಾನೆ – ಅಕಸ್ಮಾತ್ ಗಾಡಿ ತಪ್ಪಿಸಿಕೊಂಡರೆ?

ಸುಮಾ ಕೂಡ ಆತಂಕದ ಸ್ವಭಾವದವಳು. ತನಗೇನು ಬೇಕೆಂದು ಯೋಚಿಸಿದ್ದೇ ಬಹು ಕಡಿಮೆ. ಬೇರೆಯವರು ಹೇಳಿದಂತೆ ಕೇಳಿದ್ದೇ ಹೆಚ್ಚು. ಎಲ್ಲರೂ ಮೆಚ್ಚುವಂತೆ ನಡೆಯುತ್ತಿದ್ದರೂ ಯಾರಾದರೂ ಆಕ್ಷೇಪಣೆ ತೋರಿದರೆ, ತಪ್ಪು ಹುಡುಕಿದರೆ ಎನ್ನುವ ಭಯ ಅವಳನ್ನು ಸದಾ ಕಾಡುತ್ತದೆ. ಇತರರನ್ನು ಮೆಚ್ಚಿಸುವುದರ ಹಿಂದೆ ಅವರೂ ತನ್ನನ್ನು ಮೆಚ್ಚಬೇಕು ಎಂಬ ತುಡಿತವಿದೆ. ಮೆಚ್ಚಿಗೆ ಸಿಕ್ಕಾಗ ತೃಪ್ತಿಯಾಗದೆ ಇನ್ನೂ ಬೇಕಿತ್ತು ಎನ್ನಿಸುತ್ತದೆ. ಮೆಚ್ಚಿಗೆ ಸಿಗದಿದ್ದರೆ ಅಸಮಾಧಾನದಿಂದ ಹರಿಹಾಯುತ್ತಾಳೆ; ನಂತರ ಅಳುಕುತ್ತಾಳೆ.

ಮದುವೆಯ ನಂತರ ಕೆಲವು ರಾತ್ರಿಗಳಲ್ಲಿ ಇಬ್ಬರೂ ಮಾತಾಡಿಕೊಳ್ಳುವಾಗ (ಹಗಲು ಅಪ್ಪ ಅಮ್ಮ ಇರುವುದರಿಂದ ಮಾತಾಡಲು ಅವಕಾಶ ಇಲ್ಲ.) ಸುಮೇಶನಿನ್ನೂ ಪ್ರೊಬೇಶನ್‌ನಲ್ಲಿ ಇರುವುದರಿಂದ ಒಂದು ವರ್ಷ ಮಗು ಬೇಡ ಎಂದಿದ್ದಾನೆ. ಅವನೆಲ್ಲಿ ಮಗುವಿನ ಬೇಡಿಕೆ ಒಡ್ಡುತ್ತಾನೋ ಎಂದು ಅಳುಕುತ್ತಿದ್ದ ಸುಮಾಳಿಗೆ ಅವನ ಮಾತು ಅಪ್ಯಾಯಮಾನವಾಗಿದೆ. ಹಾಗಾಗಿ ಲೈಂಗಿಕ ಕ್ರಿಯೆಯ ಬಗೆಗೆ ಯೋಚಿಸದೆ ವರ್ಷವಿಡೀ ಆರಾಮವಿದ್ದಾರೆ. ನಂತರ ಹಿರಿಯರಿಂದ ಮಗುವಿನ ಪ್ರಸ್ತಾಪ ಬಂದು, ಏನೋ ಮರೆತವರಂತೆ ಗಲಿಬಿಲಿಗೊಳಗಾಗಿ ಸಂಭೋಗಕ್ಕೆ ಪ್ರಯತ್ನಪಟ್ಟಿದ್ದಾರೆ. ಆಗ ಅರಿವಿಗೆ ಬಂದದ್ದು ಏನೆಂದರೆ ಅವಳಿಗೆ ಇನ್ನೂ ಆಗದ ಸಂಭೋಗದಲ್ಲಿ ನೋವಿನ ಭಯವಿದೆ, ಹಾಗೂ ಸಂಭೋಗವಾದರೂ ಮಗುವಾಗದಿದ್ದರೆ ಎಂದು ಆತಂಕವಿದೆ. ಇನ್ನು, ಸುಮೇಶನ ಕಳವಳದ ಕಾರಣಗಳೇ ಬೇರೆ. ಅವನಿಗೆ ಹೆಂಡತಿಗೆ (ಸಂಭೋಗದ ಮೂಲಕ ಶರೀರಕ್ಕೆ, ಅಥವಾ ಮಾಡದಿದ್ದರೆ ಅವಳ ಮನಕ್ಕೆ) ನೋವು ಉಂಟುಮಾಡುವ ಭಯವಿದೆ. ಅಲ್ಲದೆ, ಗರ್ಭ ಒತ್ತಟ್ಟಿಗಿರಲಿ, ಸಂಭೋಗ ಮಾಡಲು ಆಗದಿದ್ದರೆ? ಅಷ್ಟಕ್ಕೂ ಇಲ್ಲಿಯ ತನಕ ಸಂಭೋಗ ಮಾಡಿ ಗೊತ್ತೇ ಇಲ್ಲವಲ್ಲ? ಎಲ್ಲವನ್ನೂ ಮುಂಚೆಯೇ ಮಾಡಿಬಿಡುವವನು ಇದರಲ್ಲಿ ಯಾಕೆ ಹಿಂದೆ ಉಳಿಯುವ ಹಾಗಾದ?

ಹೀಗೆ, ಮುನ್ನುಗ್ಗುವ ಸ್ವಭಾವ ಇಲ್ಲದ ಇಬ್ಬರೂ ಸೇರಿ ಹಿಂದೇಟು ಹಾಕುತ್ತ ಮುಂದೆ ತೆವಳುತ್ತಿದ್ದಾರೆ. ಮಲಗುವ ಕೋಣೆಯ ಅರೆಗತ್ತಲೆಯಲ್ಲಿ ಅವಳ ತೊಡೆಗಳ ನಡುವೆ ಅವನು ಎಲ್ಲೋ ಒಳಹೋಗಬೇಕೆಂದು ತಡಕಾಡುತ್ತಿರುವಾಗ ಅವಳು ಮಲಗಿ ಉಸಿರಿನ ಜೊತೆಗೆ ಮೈಯನ್ನೂ ಬಿಗಿಹಿಡಿದಿರುತ್ತಾಳೆ. ಏನೇ ಹೆಣಗಿದರೂ ಪ್ರವೇಶ ಅಸಾಧ್ಯವಾದಾಗ ಆತಂಕ ಹೆಚ್ಚಾಗಿ ಅವನಿಗೆ ಉದ್ರೇಕ ಇಳಿದುಬಿಡುತ್ತದೆ. ಹೀಗೆ ಹಲವು ಸಲ ಯತ್ನಿಸಿಯೂ ಸಾಧ್ಯವಾಗದಿರುವಾಗ ಸೋಲಿನ ಭಯದಿಂದ ಪ್ರಯತ್ನವನ್ನೇ ಕೈಬಿಟ್ಟಿದ್ದಾರೆ. ಎರಡು ವರ್ಷಗಳಾದರೂ ಮಕ್ಕಳಾಗದಿರುವಾಗ ಹಿರಿಯರ ಒತ್ತಾಯ ಹೆಚ್ಚಾಗಿದೆ. ಪರಿಣಾಮವಾಗಿ ಮುಂಚೆಯಿದ್ದ ಅಷ್ಟಿಷ್ಟು ಇಚ್ಛಾಶಕ್ತಿಯೂ ಮಾಯವಾಗಿದೆ. ಒತ್ತಾಯ ತಲೆಯಲ್ಲಿ ಟ್ಟುಕೊಂಡು ಮುಂದುವರಿದರೆ ಹಿರಿಯರು ಮಲಗುವ ಕೋಣೆಯಲ್ಲಿ ನಿಂತು ತಮ್ಮನ್ನು ಗಮನಿಸುತ್ತಿದ್ದಾರೆ ಎನ್ನಿಸುತ್ತದೆ. ಅತ್ತೆಯ ಸಲಹೆಯ ಮೇರೆಗೆ ಸಹಾಯಿತ ಗರ್ಭಧಾರಣೆಯ ಮೊರೆಹೋಗಿದ್ದಾರೆ. ಅಲ್ಲಿ ಸುಮೇಶನಿಗೆ ವೀರ್ಯ ಕೊಡಲು ಸಾಧ್ಯವಾಗದ್ದಕ್ಕೆ ಮಹಿಳಾ ವೈದ್ಯರು ಅವರನ್ನು ಇಲ್ಲಿಗೆ ಕಳಿಸಿದ್ದಾರೆ. ತಮಗಾಗಿ ಅಲ್ಲದಿದ್ದರೂ ಇತರರಿಗಾಗಿ, ಸುಖಕ್ಕಾಗಿ ಅಲ್ಲದಿದ್ದರೂ ಸಂತಾನಕ್ಕಾಗಿ ಸಂಭೋಗ ಮಾಡುವ ಅನಿವಾರ್ಯತೆ ಇವರಿಗಿದೆ.

(ಇಲ್ಲೊಂದು ಪ್ರಶ್ನೆ: ಕಾಮಕೂಟದಲ್ಲಿ ಒಂದು ವ್ಯಕ್ತಿಯ ವರ್ತನೆಗೂ ಅವನ/ಳ ವ್ಯಕ್ತಿತ್ವಕ್ಕೂ ಏನಾದರೂ ಸಂಬಂಧವಿದೆಯೆ? ಇದನ್ನು ಇನ್ನೊಂದು ಸಲ ನೋಡೋಣ.)

### ಸಯಾಮಿ ಅವಳಿಗಳು

ಈ ಪ್ರಸಂಗದಲ್ಲಿ ನಾನು ಸುಮಾಳನ್ನು ಪ್ರಶ್ನಿಸಿದೆ: 'ಇಲ್ಲಿಯ ತನಕ ಒಂದುಸಲವೂ ಸಂಭೋಗಕ್ಕೆ ಪ್ರಯತ್ನ ಪಡದೆ ನೋವು ಅಂತ ನಿಮಗೆ ಹೇಗೆ ಗೊತ್ತಾಯಿತು?' ಸ್ವಲ್ಪ ಯೋಚಿಸಿದ ನಂತರ ಆಕೆಗೆ ಅರ್ಥವಾಯಿತು: ಇಲ್ಲಿಯ ತನಕ ಗಂಡ ತನ್ನೊಳಗೆ ಪ್ರವೇಶದ ಪ್ರಯತ್ನ ಮಾಡಲು ತಾನು ಬಿಟ್ಟಿಲ್ಲ. ಅಂದರೆ ಆಕೆಗೆ ಭಯವಾಗುತ್ತಿರುವುದು ನೋವು ಅನುಭವಿಸಿದ್ದರಿಂದ ಅಲ್ಲ, ಬದಲು ನೋವಿನ ಕಲ್ಪನೆಯಿಂದ! ಆಕೆಯ ಕಲ್ಪನೆಯನ್ನು ಸರಿಯಾಗಿ ಅರ್ಥೈಸದ ಸುಮೇಶನಿಗೆ ತಾನು ಆಕೆಗೆ ನೋವು ಕೊಡುತ್ತಿದ್ದೇನೆ ಎಂದು ತಿಳಿದುಕೊಂಡಿರುವುದೂ ಕಲ್ಪನೆಯೆ. ಹೀಗೆ ಇಬ್ಬರ ಆತಂಕದ ಮೂಲವೇ ಕಾಲ್ಪನಿಕ. ಇದು ಹುಟ್ಟಿದ್ದು ಅವರವರ ನಂಟಿನ ಮೂಲದಿಂದ ಬಂದಿದ್ದೇ ವಿನಾ ಕಾಮಕೂಟದಿಂದ ಅಲ್ಲ. ಇನ್ನೊಂದು ವಿಷಯ: ಮೊದಲ ವರ್ಷ ಮಗು ಬೇಡವೆಂದರು ಸರಿ, ಆದರೆ ಕಾಮಕ್ರಿಯೆ ಕೂಡ ಬೇಡವೆಂದಿದ್ದು ಏಕೆ? ಇಬ್ಬರೂ ಆತಂಕದ ಸಂದರ್ಭದಿಂದ ತಪ್ಪಿಸಿಕೊಳ್ಳುತ್ತಾರೆಯೇ ವಿನಾ ಅದನ್ನು ಎದುರಿಸುವುದಿಲ್ಲ! ಅಷ್ಟಲ್ಲದೆ ಇನ್ನೊಂದು ವಿಶೇಷವೂ ಇದೆ. ಒಬ್ಬರಿಗೆ ಸಂಕಟ ಎದುರಾದಾಗ ಇನ್ನೊಬ್ಬರು ಅದರಿಂದ ಹೊರಬಂದು ನಿಂತು ಯೋಚಿಸುವುದರ ಬದಲು ತಾನೂ ಸಂಕಟಕ್ಕೆ ಒಳಗಾಗುತ್ತ ಸಂಗಾತಿಯ ಸ್ಥಿತಿಯನ್ನು ವಿಷಮಗೊಳಿಸುತ್ತಾರೆ. ಹೀಗೇಕೆ? ಸಯಾಮಿ ಅವಳಿಗಳಂತೆ ಇಬ್ಬರೂ ಭಾವನಾತ್ಮಕವಾಗಿ ಪರಸ್ಪರ ಬೆಸುಗೆ ಹಾಕಿಕೊಂಡಿದ್ದಾರೆ. ಹಾಗಾಗಿ ವೈಯಕ್ತಿಕ ವಿಕಾಸಕ್ಕೆ ಅಗತ್ಯವಾದ ಪ್ರತ್ಯೇಕತೆಗೆ ಜಾಗವಿಲ್ಲ (ಈ ಪ್ರತ್ಯೇಕತೆಯ ಮಹತಿಯನ್ನು ಇನ್ನೊಂದು ಸಲ ತಿಳಿಯೋಣ). ಒಂದು ಕುರಿ ಹಳ್ಳಕ್ಕೆ ಬಿದ್ದರೆ ಇನ್ನೊಂದು ಅದರ ಹಿಂದೆ ಬೀಳುವಂತೆ ಚಿಂತೆಯನ್ನು ಹೆಚ್ಚಿಸಲು ಪರಸ್ಪರ ಪ್ರಚೋದಿಸುತ್ತಾರೆ. ಹೀಗಾಗಿ ಅವರ ಸಂಬಂಧ ಸ್ವಲ್ಪವೂ ಬೆಳೆದಿಲ್ಲ.

ದಾಂಪತ್ಯದಲ್ಲಿ ಬೆಸುಗೆಯ ಪಾತ್ರ ಏನು ಅಂತ ಗೊತ್ತಾಯಿತಲ್ಲ?

ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಬೆಳಿಗ್ಗೆ 11ರಿಂದ ಸಂಜೆ 5ರ ತನಕ ಕರೆಮಾಡಿ.

ಲೇಖಕರ ವಿಳಾಸ: www.medisex.org